# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3900/ 2023

**ಚಾಸಾ ಃ- 05 / ಪ್ರಾಸಾ ಃ- 03**

| | |
|---|---|
| ಹೆಸರು | ನವಾಜ್ |
| ತಂದೆ ಹೆಸರು | ಶಾಕೀರಾ |
| ವಯಸ್ಸು | 28 |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಮದೀನಾ ಮೊಹಲ್ಲಾ , ಮಾಗಡಿ ಟೌನ್ |

**ದಿನಾಂಕಃ 12.09.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 1, 2 ಮತ್ತು 6 ರವರು ಪರಿಚಯ ಇರುತ್ತಾರೆ. ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸುಮಾರು ಎರಡು ವರ್ಷಗಳ ಹಿಂದೆ ಸಹಿಯನ್ನು ಸುಮಾರು 11.00 ಗಂಟೆ ಸಮಯದಲ್ಲಿ ಹಾಕಿರುತ್ತೇನೆ. ಜಮೀನಿನ ವಿಚಾರದಲ್ಲಿ ಗೌರಮ್ಮ ಮತ್ತು ನಿಂಗಯ್ಯ ರವರ ನಡುವೆ ಜಗಳ ಆಗಿರುವ ಸಂಬಂಧ ಪೋಲಿಸರು ಬಂದು ತನಿಖೆಯನ್ನು ಮಾಡಿ ದೊಣ್ಣೆಯನ್ನು ಜಪ್ತಿ ಪಡಿಸಿಕೊಂಡು ಸಹಿಯನ್ನು ಪಡೆದಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ2 ಮತ್ತು 6 ರವರು ಇದ್ದರು. ಸದರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಲಾಗಿ ಸದರಿ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 09.06.2023 ರಂದು ಈ ಪ್ರಕರಣದ ಸಂಬಂಧ ಮಹಜರ್ ಹಾಜರಾಗಲು ಪೋಲಿಸರು ನಿಮಗೂ ಮತ್ತು ಚಾಸಾ 6 ರವರಿಗೂ ನೋಟೀಸನ್ನು ನೀಡಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದರಂತೆ ಪೋಲಿಸರು ಕೃತ್ಯ ಸ್ಥಳದ ಮಹಜರ್ ಗೆ ಉಡುವೆಗೆರೆ ಗ್ರಾಮಕ್ಕೆ ಸೇರಿರುವ ಸವೆ ನಂ .16ರ ಜಮೀನಿನಲ್ಲಿ ಇರುವ ತಪಸ್ಸು ಮರದ ಬಳಿ ಇರುವ ಜಮೀನಿನ ಬದುವಿನ ಬಳಿ ದಿಾಂಕ 06.06.2023 ರಂದು ಆರೋಪಿಯು ಚಾಸಾ 1 ಮತ್ತು 2 ರವರೊಂದಿಗೆ ಜಗಳ ಮಾಡಿ ದೊಣ್ಣೆಯಿಂದ ಹಲ್ಲೆ ಮಾಡಿದ ಸ್ಥಳ ಇದೆ ಎಂದು ಚಾಸಾ 2 ರವರು ತೋರಿಸಿದ ಮೇರೆಗೆ ನಿಮ್ಮ ಹಾಗೂ ಚಾಸಾ 6 ರವರ ಸಮಕ್ಷಮ ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಕೃತ್ಯ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಮಗೆ ಓದಲು ಬರುವುದಿಲ್ಲವಾದರಿಂದ ನೀವು ಸದರಿ ದಿನಾಂಕವನ್ನು ಮರೆತಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ವಿ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ನೀವು ಮೂಲತಃ ಮಾಗಡಿ ಟೌನ್ ನಲ್ಲಿ ವಾಸ ಇರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗೂ ಮತ್ತು ನಿಮಗೂ ಮಾತುತಕತೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 1 ಮತ್ತು 4 ರವರು ನಿಮಗೆ ಪರಿಚಯ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಚಾಸಾ 1 ಮತ್ತು 2 ರವರೊಂದಿಗೆ ಅನ್ಯೋನ್ಯವಾಗಿ ಇದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಗೊತ್ತು ಎಂದು ನುಡಿಯುತ್ತಾರೆ. ನಿಮಗೆ ಓದಲು ಬುರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಕಾರಣ ನಿಮಗೆ ಮಹಜರಿ ನಲ್ಲಿ ಏನು ಬರೆದಿದೆ ಎಂದು ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಓದಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಸಹಿಯನ್ನು ನೀವು ಪೋಲಿಸ್ ಠಾಣೆಯಲ್ಲಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ಸದರಿ ಮುದ್ದೆಮಾಲು 1 ಅನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದು ಏನಾದರೂ ಗುರುತು ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಅದರಲ್ಲಿ ಮಾರ್ಡ್ ಇದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಎಲ್ಲಾ ದೊಣ್ಣೆಗಳಲ್ಲಿ ಮಾರ್ಕ್ ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಆದರೆ ಜಪ್ತಿ ಮಾಡಿದ ದೊಣ್ಣೆ ಇದೇ ಎಂದು ನುಡಿಯುತ್ತಾರೆ. ಚಾಸಾ 1 ರವರು ಆರೋಪಿಯ ತಂದೆಯ 2 ನೇ ಹೆಂಡತಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 1 ರವರಿಗೆ ಅನುಕೂಲ ವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ**
**ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3900/ 2023**

**ಚಾಸಾ ಃ- 06 / ಪ್ರಾಸಾ ಃ- 04**

| | |
|---|---|
| ಹೆಸರು | ಮಹದೇವ |
| ತಂದೆ ಹೆಸರು | ಸಿದ್ದರಾಜು |
| ವಯಸ್ಸು | 27 |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಕಲ್ಯಾ ಗೇಟ್ , ಮಾಗಡಿ ಟೌನ್ |

**ದಿನಾಂಕಃ 12.09.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 1, 2 ಮತ್ತು 5 ರವರು ಪರಿಚಯ ಇರುತ್ತಾರೆ. ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಉಡುವೆಗೆರೆ ಗ್ರಾಮದ ಸರ್ವೆ ನಂ.129 ಜಮೀನಿನ ಚಾಸಾ1 ಮತ್ತು 2 ರವರ ಜಮೀನಿನಲ್ಲಿ ಕುರಿ ಮತ್ತು ಹಸುವನ್ನು ಮೇಯಿಸಲು ಹೋದಾಗ ಜಗಳ ಆಗಿರುವ ಸಂಬಂಧ ದಿನಾಂಕ 09.06.2023 ರಂದು ಬೆಳಿಗ್ಗೆ 11.00 ರಿಂದ 12.00 ಗಂಟೆ ಸಮಯದಲ್ಲಿ ಮಹಜರನ್ನು ಜರುಗಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ 5, ಚಾಸಾ 2 ಮತ್ತು ಪೋಲಿಸರು ಇದ್ದರು. ಸದರಿ ಪಂಚನಾಮೆಯ ಸಮಯದಲ್ಲಿ ಪೋಲಿಸರು ದೊಣ್ಣೆಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಲಾಗಿ ಸದರಿ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಜರುಗಿಸಿ ನನ್ನ ಮತ್ತು ಚಾಸಾ 5 ರವರ ಸಹಿಯನ್ನು ಪಡೆದಿರುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಎಂ ವಿ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಚಾಸಾ 2 ರವರು ಈ ದಿನ ನ್ಯಾಯಾಲಯದ ಹೊರಗಡೆ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸರ್ವೆ ನಂ.129 ಎಂದು ನಿಮಗೆ ಹೇಗೆ ಗೊತ್ತು ಎಂದರೆ ಸಾಕ್ಷಿ ನಮಗೆ ಮಹಜರ್ ಸಮಯದಲ್ಲಿ ಓದಿ ಹೇಳಿರುತ್ತಾರೆ ಎಂದು ನುಡಿಯತ್ತಾರೆ. ಮಹಜರ್ ನಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿರುತ್ತದೆಯೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಗಲಾಟೆ ಆಗಿರುತ್ತದೆ ಎಂದು ಬರೆದಿರುತ್ತದೆ ಎಂದರೆ ಸಾಕ್ಷಿ ದಿನಾಂಕ 06 , 06ನೇ ತಿಂಗಳು ಎಂದು ಬರೆದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನು ಯಾರದ್ದು ಎಂದು ಗೊತ್ತಿರುತ್ತ್ದದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಎಷ್ಟು ಗಂಟೆಗೆ ಕೆಲಸಕ್ಕೆ ಹೋಗಿ ಎಷ್ಟು ಗಂಟೆಗೆ ಬರುತ್ತೀರಿ ಎಂದರೆ ಸಾಕ್ಷಿ ಬೆಳಿಗ್ಗೆ 10.00 ಗಂಟೆಗೆ ಹೋಗಿ 6 ಅಥವಾ 7 ಗಂಟೆಗೆ ಬರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆ ಜರುಗಿಸಿದಾಗ ನೀವು ಎಲ್ಲಿ ಕೆಲಸ ಮಾಡುತ್ತಿದ್ದಿದ್ದು ಎಂದರೆ ಸಾಕ್ಷಿ ಕಲ್ಯಾ ಗೇಟ್ ನಲ್ಲಿ ಎಂದು ನುಡಿಯುತ್ತಾರೆ.

ಸದರಿ ಕಲ್ಯಾ ಗೇಟ್ ನಿಂದ ಉಡುವೆಗೆರೆಗೆ 4-5 ಕಿ.ಮೀ. ಆಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಹಜರ್ ಗೆ ಹಾಜರಾಗಲು ನಿಮಗೆ ಯಾರು ಕರೆದಿದ್ದರು ಎಂದರೆ ಸಾಕ್ಷಿ ಪೋಲಿಸರು ಎಂದು ನುಡಿಯುತ್ತಾರೆ. ನೋಟೀಸ್ ನೀಡಿದ್ದರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಹಾಗೂ ಚಾಸಾ 2 ರಿಂದ 5 ರವರು ಉರಿಮಿಷಿನ್ ನಲ್ಲಿ ಕೆಲಸ ಮಾಡುವುದು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಾನು , ಚಾಸಾ 5 ಮತ್ತು ಚಾಸಾ 2 ರವರ ಯಜಮಾನರಾದ ನಿಂಗಯ್ಯ ರವರು ಮೊದಲು ಒಂದೇ ಕಡೆ ಕೆಲಸ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ದೊಣ್ಣೆಯನ್ನು ಪೋಲಿಸರಿಗೆ ಯಾರು ಕೊಟ್ಟಿರುತ್ತರೆ ಎಂದರೆ ಸಾಕ್ಷಿ ಯಾರು ಕೊಟ್ಟಿರುವುದಿಲ್ಲ ಸ್ಥಳದಲ್ಲೆ ಬಿದ್ದಿತ್ತು ಎಂದು ನುಡಿಯುತ್ತಾರೆ. ಸ್ಥಳಕ್ಕೆ ಪೋಲಿಸರು ಬಂದಿರುವುದಿಲ್ಲ ಹಾಗೂ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ನಿಮ್ಮ ಸಮಕ್ಷಮ ಯಾವುದೇ ದೊಣ್ಣೆಯನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ , ಚಾಸಾ 1 ಮತ್ತು 2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ. ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**